**ಓ. ಎಸ್ . 6/2015**

**ಡಿ.ಡಬ್ಲ್ಯೂ- 4**

ದಿನಾಂಕ **09-08-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಡಿ ಪಿ ಟಿ ವಾದಿ ಪರ ವಕೀಲರಿಂದ -

ನಾನು 6 ನೇ ತರಗತಿವರೆಗೆ ಓದಿರುತ್ತೇನೆ. ಈ ಕೇಸನ್ನು ಬಸವ್ವ ಇವರು ನಾನು ಶೆಟ್ಟೆಪ್ಪನ ಮಗಳು ಎಂದು ದಾವೆ ಮಾಡಿರುತ್ತಾಳೆ. ವಾದಿ ಬಸವ್ವ ತಮ್ಮ ತಂದೆಯ ಆಸ್ತಿಯಲ್ಲಿ ಪಾಲು ಕೋರಿ ಈ ದಾವೆ ಸಲ್ಲಿಸಿರುತ್ತಾಳೆ ಎಂದರೆ ಸರಿ. ಆದರೆ ಅದು ಸುಳ್ಳು ಇರುತ್ತದೆ. ಈ ಕೇಸನ್ನು ಸರ್ವೆ ನಂ. 475 ಮತ್ತು 374 ಜಮೀನುಗಳಿಗೆ ಸಂಬಂಧಿಸಿದಂತೆ ಹಾಕಿರುತ್ತಾರೆ. ಸದರಿ ಜಮೀನುಗಳು ದಕ್ಷಿಣೋತ್ತರವಾಗಿರುತ್ತವೆ. ಆ ಎರಡೂ ಜಮೀನುಗಳ ನಡುವೆ ಒಂದು ಬಾಂದು ಇದ್ದು ಪೂರ್ವ ಬಾಜು ವಾದಿಯ ತಂದೆ ಶೆಟ್ಟೆಪ್ಪ ಸಾಗು ಮಾಡುತ್ತಿದ್ದ ಹಾಗೂ ಪಶ್ಚಿಮ ಬಾಜು ನಮ್ಮ ಮಾವ ಬಾಳಪ್ಪ ಸಾಗು ಮಾಡುತ್ತಿದ್ದ ಎಂದರೆ ಸಾಕ್ಷಿಯು ಶೆಟ್ಟೆಪ್ಪ ಸಾಗು ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೂರ್ವದ ಬಾಜು ಶೆಟ್ಟೆಪ್ಪ ಸಾಗು ಮಾಡುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮಾವ ಬಾಳಪ್ಪಾ 2008 ರಲ್ಲಿ ತೀರಿಕೊಂಡಿರುತ್ತಾರೆ. ಸ್ವಪ್ನ ಘೂಳಪ್ಪ ಬಂಗಾರಿ ಎಂದು ತೋರಿಸಲು ಆಧಾರ ಕಾರ್ಡ , ಪಡಿತರ ಚೀಟಿ ಹಾಗೂ ಚುನಾವಣಾ ಗುರುತಿನ ಚೀಟಿ ಮತ್ತು ಆರ್ ಟಿ ಸಿ ದಾಖಲೆಗಳು ಇರುತ್ತವೆ. ಬಾಳಪ್ಪನಿಗೆ 1 ರಿಂದ 6 ನೇ ಪ್ರತಿವಾದಿಯರು ವಾರಸುದಾರರು ಎಂದರೆ ಸರಿ . ಬಾಳಪ್ಪನ ವಾರಸುದಾರರು ಎಂದು ತೋರಿಸಲು ವಾರಸಾ ಪ್ರಮಾಣಪತ್ರ ಹಾಜರುಪಡಿಸಿರುವುದಿಲ್ಲ. ವಾರಸಾ ಪ್ರಮಾಣಪತ್ರ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ .

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ